<u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 04.10.2023ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2023-24ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು:**

**ಅನುಪಸ್ಥಿತರು:**

<u>**ಪ್ರಾರಂಭಿಕ**</u>

ಪ್ರಾರಂಭದಲ್ಲಿ ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು, ಎಲ್ಲಾ ಸದಸ್ಯರುಗಳು, ವಿಶೇಷ ಆಹ್ವಾನಿತರು ಮತ್ತು ಮಾಧ್ಯಮ ಮಿತ್ರರನ್ನು ಸಭೆಗೆ ಸ್ವಾಗತಿಸಿದರು.

- **ಸ್ವಾಗತ**

I. ಸರಕಾರದ ಆದೇಶ ಸಂಖ್ಯೆ: ಸಿಆಸುಇ 323 ಆಸೇವ 2023 ದಿನಾಂಕ 12.09.2023ರಂತೆ ಶ್ರೀ ರಾಜು ಕೆ., ಕೆ.ಎ.ಎಸ್. ಇವರು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿರುವ ವಿಚಾರವನ್ನು ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸುತ್ತಾ, ಸಭೆಗೆ ಸ್ವಾಗತಿಸಿದರು.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 30(1)(iv) ರ ಪ್ರಕಾರ ಸರಕಾರದ ಪತ್ರ ಸಂಖ್ಯೆ:ವಿಸಸ/ಶಾರದಾ /03/ಮಂವಿವಿ/2005-23 ದಿನಾಂಕ 16.08.2023ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯ ಸದಸ್ಯರುಗಳಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ವಿಧಾನಸಭಾ ಸದಸ್ಯರುಗಳನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.

1. ಡಾ.ಮಂತರ್ ಗೌಡ (MLA), ಪಿ.ಬಿ.ನಂ.10 ನಗರೂರು ಎಸ್ಟೇಟ್ ಬೈಗುಂದ ಪೋಸ್ಟ್ ಸೋಮವಾರ ಪೇಟೆ ತಾಲೂಕು, ಕೊಡಗು ಜಿಲ್ಲೆ.
2. ಶ್ರೀ ಅಶೋಕ್ ಕುಮಾರ್ ರೈ (MLA), ನಂ.1-178, "ರೈ ಎಸ್ಟೇಟ್ ಮನೆ" ಕೋಡಿಂಬಾಡಿ, ಕೋಡಿಂಬಾಡಿ ಗ್ರಾಮ, ಪುತ್ತೂರು - 574325.
3. ಶ್ರೀ ಗುರ್ಮೆ ಸುರೇಶ್ ಶೆಟ್ಟಿ (MLA), 5-38, ಪದ್ಮಶ್ರೀ ಗುರ್ಮೆ ಹೌಸ್, 108 ಕಳತ್ತೂರ್ ಗ್ರಾಮ, ಕಳತ್ತೂರು ದಕ್ಷಿಣ ಪೋಸ್ಟ್, ಕಾಪು ತಾಲೂಕು, ಉಡುಪಿ ಜಿಲ್ಲೆ-574106.

III. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(vi)ರ ಪ್ರಕಾರ

ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ Rev. ಫಾದರ್ ಅರುಣ್ ವಿಲ್ಸನ್ ಲೋಬೋ, ಪ್ರಾಂಶುಪಾಲರು, ಪದುವ ಕಾಲೇಜ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ಕದ್ರಿ ಹಿಲ್ಸ್, ನಂತೂರು, ಮಂಗಳೂರು ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.

IV. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 30(1)(viii)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಪ್ರಾಧ್ಯಾಪಕರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ.ಕರುಣಾಕರ್ ಎನ್., ಪ್ರಾಧ್ಯಾಪಕರು, USIC, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.

➢ **ಕೃತಜ್ಞತೆ**

I. ದಿನಾಂಕ 01.08.2023 ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿದ್ದ ಪ್ರೊ.ರಾಜು ಕೃಷ್ಣ ಚಲಣ್ಣವರ್ ಇವರನ್ನು ಕುಲಸಚಿವರ ಹುದ್ದೆಯ ಪ್ರಭಾರದಿಂದ ಬಿಡುಗಡೆಗೊಳಿಸಿರುವ ವಿಚಾರವನ್ನು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿದ್ದ ಶ್ರೀ ಎಚ್.ತ್ರಿಲೋಕನಾಥ್, ಪ್ರಾಂಶುಪಾಲರು, ಶ್ರೀ ದೇವಿ ಕಾಲೇಜ್ ಆಫ್ ಇನ್ಫಾರ್ಮೇಶನ್ ಸೈನ್ಸ್, ಮಂಗಳೂರು ಇವರ ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಶೈಕ್ಷಣಿಕ ಮಂಡಳಿ ಸದಸ್ಯತ್ವದಿಂದ ಮುಕ್ತಗೊಳಿಸಿರುವ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು.

III. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ಪ್ರಕರಣ 30(1)(viii) ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಪ್ರಾಧ್ಯಾಪಕರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ, ಪ್ರೊ.ಶಿವಣ್ಣ, ಪ್ರಾಧ್ಯಾಪಕರು, ಸಾಗರ ಭೂ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ದಿನಾಂಕ 30.09.2023 ರಂದು ವಯೋನಿವೃತ್ತಿ ಹೊಂದಿರುವುದರಿಂದ ಶೈಕ್ಷಣಿಕ ಮಂಡಳಿ ಸದಸ್ಯತ್ವದಿಂದ ಮುಕ್ತಗೊಳಿಸಿರುವ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು.

ಇವರೆಲ್ಲರೂ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸರ್ವರಿಗೂ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

- **ಸಂತಾಪ ಸೂಚಕ ನಿರ್ಣಯ:**

ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಉದಯ ಬಿ. ಇವರು ದಿನಾಂಕ 11.08.2023ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ದಿನಾಂಕ 18.04.2020 ರಿಂದ 16.03.2022ರ ಅವಧಿಯಲ್ಲಿ ಡೀನರ ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು, ಶೈಕ್ಷಣಿಕ ಮಂಡಳಿ ಹಾಗೂ ಇತರೆ ಸಮಿತಿ ಸಭೆಗಳ ಅಧ್ಯಕ್ಷರಾಗಿದ್ದು, ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುತ್ತಾರೆ. ಇವರ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯು ಅತೀವ ಸಂತಾಪವನ್ನು ವ್ಯಕ್ತಪಡಿಸಿ, ಎರಡು ನಿಮಿಷಗಳ ಮೌನ ಪ್ರಾರ್ಥನೆಯನ್ನು ಸಲ್ಲಿಸಿ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು.

**I. ನಡವಳಿಗಳ ದೃಢೀಕರಣ**

ದಿನಾಂಕ 08.08.2023ರಂದು ನಡೆದ ಶೈಕ್ಷಣಿಕ ಮಂಡಳಿಯ 2023-24ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

**-ದೃಢೀಕರಿಸಲಾಯಿತು. –**

**II. ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮ / ವಿನಿಯಮಗಳು**

**-ಯಾವುದೂ ಇರುವುದಿಲ್ಲ.-**

III. **ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು**

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ..ಸಾ.ಸ.2:1(2023-24) |
| **ವಿಷಯ:** | ಸ್ಕೂಲ್ ಆಫ್ ಸೋಷಿಯಲ್ ವರ್ಕ್, ರೋಶನಿ ನಿಲಯ (ಸ್ವಾಯತ್ತ), ಮಂಗಳೂರು ಇಲ್ಲಿನ ಸ್ನಾತಕೋತ್ತರ ಕಾರ್ಯಕ್ರಮಕ್ಕೆ 10 ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ನೀಡುವ ಬಗ್ಗೆ. |
| **ನಿರ್ಣಯ:** | ಏಕಸದಸ್ಯ ಸಮಿತಿಯ ವರದಿಯನ್ನು ಪರಿಗಣಿಸಿಕೊಂಡು ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:2(2023-24)

**ವಿಷಯ:** ಸ್ನಾತಕೋತ್ತರ ಕನ್ನಡ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ..ಸಾ.ಸ.2:3(2023-24)

**ವಿಷಯ:** ಸ್ನಾತಕೋತ್ತರ ಕೊಡವ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:4(2023-24)

**ವಿಷಯ:** ಸ್ನಾತಕೋತ್ತರ ಇತಿಹಾಸ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಇತಿಹಾಸ ಕಾರ್ಯಕ್ರಮದಲ್ಲಿ ಹೊಸದಾಗಿ ಅಳವಡಿಸಲಾದ ಕೋರ್ಸಿನ ಶೀರ್ಷಿಕೆ ಮತ್ತು ಪಠ್ಯಕ್ಕೆ ಸಂಬಂಧಿಸಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಅಂತಿಮವಾಗಿ, ಕೋರ್ಸಿನ ಶೀರ್ಷಿಕೆ ಮತ್ತು ಪಠ್ಯಕ್ರಮವನ್ನು ಮರುಪರಿಶೀಲಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಲಾಯಿತು. ಅವಶ್ಯಕತೆಯಿದ್ದಲ್ಲಿ ಅಧ್ಯಯನ ಮಂಡಳಿ ಸಭೆಗೆ ವಿಷಯಕ್ಕೆ ಸಂಬಂಧಪಟ್ಟವರನ್ನು ಆಹ್ವಾನಿಸಬಹುದೆಂಬುದಾಗಿ ಸಭೆಯಲ್ಲಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:5(2023-24)

**ವಿಷಯ:** ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:6(2023-24)

**ವಿಷಯ:** ಸ್ನಾತಕೋತ್ತರ ಪರಿಸರ ವಿಜ್ಞಾನ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:7(2023-24)

**ವಿಷಯ:** ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ..ಸಾ.ಸ.2:8(2023-24)

**ವಿಷಯ:** ಸ್ನಾತಕೋತ್ತರ ರಸಾಯನಶಾಸ್ತ್ರ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:9(2023-24)

**ವಿಷಯ:** ಸ್ನಾತಕೋತ್ತರ ಅನಾಲಿಟಿಕಲ್ ರಸಾಯನಶಾಸ್ತ್ರ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:10(2023-24)

**ವಿಷಯ:** ಸ್ನಾತಕೋತ್ತರ ಸಾವಯವ ರಸಾಯನಶಾಸ್ತ್ರ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:11(2023-24)

**ವಿಷಯ:** ಸ್ನಾತಕೋತ್ತರ ಮೆಡಿಕಲ್ ಫಿಸಿಕ್ಸ್ ಕಾರ್ಯಕ್ರಮದ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:12(2023-24)

**ವಿಷಯ:** ಸ್ನಾತಕೋತ್ತರ ಯೋಗ ವಿಜ್ಞಾನ ಕಾರ್ಯಕ್ರಮದ ಮುಕ್ತ ಆಯ್ಕೆ ಕೋರ್ಸುಗಳ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:13(2023-24)

**ವಿಷಯ:** ಸ್ನಾತಕೋತ್ತರ ಜಿಯೋಇನ್ಫಾರ್ಮೆಟಿಕ್ಸ್ ಕಾರ್ಯಕ್ರಮದ ಪರಿಷ್ಕೃತ ಪರೀಕ್ಷಾ ಕಾರ್ಯಯೋಜನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:14(2023-24)

**ವಿಷಯ:** ಸ್ನಾತಕೋತ್ತರ ಸಾಗರ ಭೂ ವಿಜ್ಞಾನ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:15(2023-24)

**ವಿಷಯ:** ಸ್ನಾತಕೋತ್ತರ ಇಲೆಕ್ಟ್ರಾನಿಕ್ಸ್ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:16(2023-24)

**ವಿಷಯ:** ಸ್ನಾತಕೋತ್ತರ ಸ್ಪೀಚ್ ಲ್ಯಾಂಗ್ವೇಜ್ ಪಾಥಾಲಜಿ ಕಾರ್ಯಕ್ರಮದ ಆಂತರಿಕ ಮೌಲ್ಯಮಾಪನದ ಬಗ್ಗೆ.

**ನಿರ್ಣಯ:** ಆಂತರಿಕ ಮೌಲ್ಯಮಾಪನದ ಪರಿಷ್ಕೃತ ನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ..ಸಾ.ಸ.2:17(2023-24)

**ವಿಷಯ:** ಸ್ನಾತಕೋತ್ತರ ಆಡಿಯಾಲಜಿ ಕಾರ್ಯಕ್ರಮದ ಆಂತರಿಕ ಮೌಲ್ಯಮಾಪನದ ಬಗ್ಗೆ.

**ನಿರ್ಣಯ:** ಆಂತರಿಕ ಮೌಲ್ಯಮಾಪನದ ಪರಿಷ್ಕೃತ ನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ..ಸಾ.ಸ.2:18(2023-24)

**ವಿಷಯ:** ಸ್ನಾತಕೋತ್ತರ ವಾಣಿಜ್ಯ ಕಾರ್ಯಕ್ರಮದ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:19(2023-24)

**ವಿಷಯ:** ಸ್ನಾತಕೋತ್ತರ ವ್ಯವಹಾರ ಆಡಳಿತ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮಗಳ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:20(2023-24)

**ವಿಷಯ:** ಸ್ನಾತಕೋತ್ತರ ವ್ಯವಹಾರ ಆಡಳಿತ [ಟೂರಿಸಂ ಆಂಡ್ ಟ್ರಾವೆಲ್ ಮ್ಯಾನೇಜ್ ಮೆಂಟ್] ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮಗಳ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:21(2023-24)

**ವಿಷಯ:** ಹಿಂದೂಸ್ಥಾನಿ ಸಂಗೀತ ಕೋರ್ ಕೋರ್ಸಿನ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:22(2023-24)

**ವಿಷಯ:** ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಕಾರ್ಯಕ್ರಮದ ಆಯ್ಕೆ ಕೋರ್ಸುಗಳ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:23(2023-24)

**ವಿಷಯ:** ಬಿ.ಎಡ್. ಪದವಿ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮ ಮತ್ತು ತಿದ್ದುಪಡಿ ವಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ತಿದ್ದುಪಡಿ ವಿನಿಯಮವನ್ನು ಸರಕಾರದ ಅನುಮೋದನೆಗೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:24(2023-24)

**ವಿಷಯ:** ಯುಜಿಸಿ ವೃತ್ತಿ ಆಧಾರಿತ ಕೋರ್ಸುಗಳ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:25(2023-24)

**ವಿಷಯ:** ಯುಜಿಸಿ ವೃತ್ತಿ ಆಧಾರಿತ ಕೋರ್ಸುಗಳ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಕಾರ್ಯಸೂಚಿಯಲ್ಲಿ ಪ್ರಸ್ತಾವಿಸಿರುವ ಕೋರ್ಸುಗಳಲ್ಲಿ ಘಟಕವಾರು ಬೋಧನಾವಧಿಯನ್ನು ನಮೂದಿಸಬೇಕಾಗಿ ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಿ, ಸದರಿ ಕೋರ್ಸುಗಳನ್ನು ಬೋಧಿಸುವ ಉಪನ್ಯಾಸಕರ ಬೋಧನಾರ್ಹತೆಯನ್ನು ಪರಿಗಣಿಸಿಕೊಂಡು ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:26(2023-24)

**ವಿಷಯ:** ಸ್ನಾತಕೋತ್ತರ ಹಿಂದಿ ಕಾರ್ಯಕ್ರಮದ ಮತ್ತು ಹಿಂದಿ ಪಿ.ಹೆಚ್.ಡಿ. ಕೋರ್ಸುವರ್ಕಿನ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:27(2023-24)

**ವಿಷಯ:** ಗಣಿತಶಾಸ್ತ್ರ ಪಿ.ಹೆಚ್.ಡಿ. ಕೋರ್ಸುವರ್ಕಿನ ಪರೀಕ್ಷಾ ಕಾರ್ಯಯೋಜನೆ ತಿದ್ದುಪಡಿ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಪರೀಕ್ಷಾ ಕಾರ್ಯಯೋಜನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:28(2023-24)

**ವಿಷಯ:** ಸ್ನಾತಕೋತ್ತರ ಸಮಾಜಶಾಸ್ತ್ರ ಕಾರ್ಯಕ್ರಮದ ವಿದ್ಯಾರ್ಥಿ ಪ್ರವೇಶಾರ್ಹತೆ ತಿದ್ದುಪಡಿ ಅನುಮೋದನೆ ಬಗ್ಗೆ.

**ನಿರ್ಣಯ:** ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿ, ತಿದ್ದುಪಡಿ ವಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:29(2023-24)

**ವಿಷಯ:** ಸ್ನಾತಕೋತ್ತರ ಫುಡ್ ಸಾಯನ್ಸ್ ಆಂಡ್ ನ್ಯೂಟ್ರೀಷನ್ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮ, ಸ್ನಾತಕೋತ್ತರ ಫುಡ್ ಸೈನ್ಸ್ ಆಂಡ್ ಡಯಟಟಿಕ್ಸ್ ಮತ್ತು ಸ್ನಾತಕೋತ್ತರ ಫುಡ್ ಸಾಯನ್ಸ್ ಆಂಡ್ ನ್ಯೂಟ್ರೀಷನ್ ಕಾರ್ಯಕ್ರಮಗಳ ವಿದ್ಯಾರ್ಥಿ ಪ್ರವೇಶಾರ್ಹತೆ ತಿದ್ದುಪಡಿ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು. ತಿದ್ದುಪಡಿ ವಿನಿಯಮವನ್ನು ಸರಕಾರದ ಅನುಮೋದನೆಗೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:30(2023-24)

**ವಿಷಯ:** ಕಲಾ ನಿಕಾಯದ ವ್ಯಾಪ್ತಿಯಡಿ ಬರುವ ರಾಷ್ಟ್ರೀಯ ಶಿಕ್ಷಣ ನೀತಿ -2020ರ ಪದವಿ ಕಾರ್ಯಕ್ರಮಗಳ /ಕೋರ್ ಕೋರ್ಸುಗಳ V ಮತ್ತು VI ಸೆಮಿಸ್ಟರ್‌ಗಳ ಮತ್ತು ಕೌಶಲ್ಯವರ್ಧಕ ಕೋರ್ಸುಗಳ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:**

1. B.A. - History - ಅನುಮೋದಿಸಲಾಯಿತು.
2. B.A. Ancient History & Archaeology - ಅನುಮೋದಿಸಲಾಯಿತು.
3. B.A - TTM - ಅನುಮೋದಿಸಲಾಯಿತು.
4. B.A - Economics - ಅನುಮೋದಿಸಲಾಯಿತು.
5. B.A - Hindi. - ಅನುಮೋದಿಸಲಾಯಿತು.
6. B.A. - Kannada -ಅನುಮೋದಿಸಲಾಯಿತು.
7. B.A. Political Science - ಅನುಮೋದಿಸಲಾಯಿತು.
8. B.A - English - ಕೋರ್ಸಿನ ಪರೀಕ್ಷಾ ಅವಧಿಯನ್ನು 2.30 ಗಂಟೆಗೆ ಬದಲಾಗಿ 2.00 ಗಂಟೆ ಎಂಬುದಾಗಿ ಸರಿಪಡಿಸಲು ಸೂಚಿಸಿ ಪಠ್ಯಕ್ರಮವನ್ನು ಅನುಮೋದಿಸಲಾಯಿತು.
9. B.A. - Sociology - ಅನುಮೋದಿಸಲಾಯಿತು.
10. B.A. Sanskrit -ಅನುಮೋದಿಸಲಾಯಿತು.
11. B.A.- Secretarial Practice - ಅನುಮೋದಿಸಲಾಯಿತು.
12. B.A. - Office Practice & Management - ಅನುಮೋದಿಸಲಾಯಿತು.
13. B.A. - Business Management - ಅನುಮೋದಿಸಲಾಯಿತು.
14. B.A. - Rural Development - ಅನುಮೋದಿಸಲಾಯಿತು.
15. B.A. - Co-operation - ಅನುಮೋದಿಸಲಾಯಿತು.
16. B.A. (HRD) - ಅನುಮೋದಿಸಲಾಯಿತು.
17. B.S.W. - ಅನುಮೋದಿಸಲಾಯಿತು.
18. BVA- ಅನುಮೋದಿಸಲಾಯಿತು.
19. BA - Journalism -ಅನುಮೋದಿಸಲಾಯಿತು.
20. B.A. Geography ಅನುಮೋದಿಸಲಾಯಿತು.
21. BA - Home Science - ಅನುಮೋದಿಸಲಾಯಿತು.
22. B.A. - Psychology - ಅನುಮೋದಿಸಲಾಯಿತು.
23. B.A. - Philosophy - ಅನುಮೋದಿಸಲಾಯಿತು.
24. B.A. - Women's Studies - ಅನುಮೋದಿಸಲಾಯಿತು.

25. U.G. Programme - Cyber Security.  - ಅನುಮೋದಿಸಲಾಯಿತು.

26. U.G. Programme - Employability Skills. -ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:31(2023-24)

**ವಿಷಯ:** ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವ್ಯಾಪ್ತಿಯಡಿ ಬರುವ ರಾಷ್ಟ್ರೀಯ ಶಿಕ್ಷಣ ನೀತಿ-2020 ರ  ಪದವಿ ಕಾರ್ಯಕ್ರಮಗಳ /ಕೋರ್ ಕೋರ್ಸುಗಳ V ಮತ್ತು VI ಸೆಮಿಸ್ಟರ್‌ಗಳ ಮತ್ತು ಕೌಶಲ್ಯವರ್ಧಕ ಕೋರ್ಸುಗಳ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:**

| | |
|---|---|
| 1.B.Sc. (Hospitality Science) | ಅನುಮೋದಿಸಲಾಯಿತು. |
| 2.B.Sc. Chemistry | ಅನುಮೋದಿಸಲಾಯಿತು. |
| 3.B.Sc. Botany | ಅನುಮೋದಿಸಲಾಯಿತು. |
| 4.B.Sc. (Home Science) | ಅನುಮೋದಿಸಲಾಯಿತು. |
| 5.B.Sc. (Food Nutrition & Dietetics) | ಅನುಮೋದಿಸಲಾಯಿತು. |
| 6. B.Sc. (Food Technology) | ಅನುಮೋದಿಸಲಾಯಿತು. |
| 7.B.Sc.(Interior Design & Decoration) | ಅನುಮೋದಿಸಲಾಯಿತು. |
| 8. B.Sc. Geography | ಅನುಮೋದಿಸಲಾಯಿತು. |
| 9. B.Sc. Mathematics | ಅನುಮೋದಿಸಲಾಯಿತು. |
| 10. B.Sc. Psychology | ಅನುಮೋದಿಸಲಾಯಿತು. |
| 11. B.Sc. Zoology | ಅನುಮೋದಿಸಲಾಯಿತು. |
| 12. B.Sc. Microbiology | ಅನುಮೋದಿಸಲಾಯಿತು. |
| 13. B.Sc. Philosophy | ಅನುಮೋದಿಸಲಾಯಿತು. |
| 14. B.Sc. Biotechnology | ಅನುಮೋದಿಸಲಾಯಿತು. |
| 15. B.Sc. Statistics | ಅನುಮೋದಿಸಲಾಯಿತು. |
| 16. B.Sc. Bio Chemistry | ಅನುಮೋದಿಸಲಾಯಿತು. |
| 17. B.Sc. Computer Science | ಅನುಮೋದಿಸಲಾಯಿತು. |
| 18. BCA | ಅನುಮೋದಿಸಲಾಯಿತು. |
| 19. B.Sc. (Fashion Design) | ಅನುಮೋದಿಸಲಾಯಿತು. |
| 20. B.Sc. (Animation & Visual Effects) | ಅನುಮೋದಿಸಲಾಯಿತು. |
| 21. B.Sc. Electronics | ಅನುಮೋದಿಸಲಾಯಿತು. |
| 22. Cyber Security (SEC for III Sem) | ಅನುಮೋದಿಸಲಾಯಿತು. |

| | |
|---|---|
| 23.Employability Skills (SEC for V Sem) | ಅನುಮೋದಿಸಲಾಯಿತು. |
| 24. Physics | ಅನುಮೋದಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:32(2023-24)

**ವಿಷಯ:** ವಾಣಿಜ್ಯ ನಿಕಾಯದ ವ್ಯಾಪ್ತಿಯಡಿ ಬರುವ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಪದವಿ ಕಾರ್ಯಕ್ರಮಗಳ /ವೊಕೇಶನಲ್ ಕೋರ್ಸುಗಳ V ಮತ್ತು VI ಸೆಮಿಸ್ಟರ್‌ಗಳ ಮತ್ತು ಕೌಶಲ್ಯವರ್ಧಕ ಕೋರ್ಸುಗಳ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:**

| | |
|---|---|
| 1. B.Com | ಅನುಮೋದಿಸಲಾಯಿತು. |
| 2. B.Com Tax Procedure and Practice (Voc) | ಅನುಮೋದಿಸಲಾಯಿತು. |
| 3.B.Com Office Management and Secretarial Practice (Voc.) | ಅನುಮೋದಿಸಲಾಯಿತು. |
| 4. B.Com Accounting and Finance (Voc)-III & IV | ಅನುಮೋದಿಸಲಾಯಿತು. |
| 5. BBA | ಅನುಮೋದಿಸಲಾಯಿತು. |
| 6. BBA (Tourism and Travel)<br>7. BBA (Logistics) | ಬಿಬಿಎ ಕಾರ್ಯಕ್ರಮದ structure ಅನ್ನು ಅನುಸರಿಸಿಕೊಂಡು ಪಠ್ಯಕ್ರಮಗಳನ್ನು ಸರಿಪಡಿಸಿ ಸಲ್ಲಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ತಿಳಿಸಿ ಪಠ್ಯಕ್ರಮವನ್ನು ಅನುಮೋದಿಸಲಾಯಿತು. |
| 8. BHM (Along with III & IV Sem revised syllabus) | ಅನುಮೋದಿಸಲಾಯಿತು. |
| 9. B.Com Computer Applications (Voc.) | ಅನುಮೋದಿಸಲಾಯಿತು. |
| 10. Cyber Security (SEC for III Sem) | ಅನುಮೋದಿಸಲಾಯಿತು |
| 11. Employability Skills (SEC for V Sem) | ಅನುಮೋದಿಸಲಾಯಿತು |

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:33(2023-24)

**ವಿಷಯ:** ಶಿಕ್ಷಣ ನಿಕಾಯದ ವ್ಯಾಪ್ತಿಯಡಿ ಬರುವ ರಾಷ್ಟ್ರೀಯ ಶಿಕ್ಷಣ ನೀತಿ -2020ರ ಪದವಿ ಕಾರ್ಯಕ್ರಮಗಳ ಕೋರ್ ಕೋರ್ಸಿನ V ಮತ್ತು VI ಸೆಮಿಸ್ಟರುಗಳ ಮತ್ತು

ಮೌಲ್ಯಧಾರಿತ ಕೋರ್ಸಿನ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

**ನಿರ್ಣಯ:** B.A./B.Sc. in Physical Education - ಅನುಮೋದಿಸಲಾಯಿತು.

Rovers and Rangers - ಅನುಮೋದಿಸಲಾಯಿತು.

(Value based courses for II-VI Sem)

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:34(2023-24)

**ವಿಷಯ:** Employability Skills ಕೌಶಲ್ಯ ವರ್ಧಕ ಕೋರ್ಸನ್ನು ಬೋಧಿಸಲು ಉಪನ್ಯಾಸಕರ ಬೋಧನಾರ್ಹತೆ ನಿಗದಿಪಡಿಸುವ ಕುರಿತು.

**ನಿರ್ಣಯ:** ಪ್ರಸ್ತಾವಿತ ಕೋರ್ಸಿಗೆ ಸಂಬಂಧಿಸಿ ವಿಶ್ವವಿದ್ಯಾನಿಲಯದಿಂದ ಆಯೋಜಿಸಲಾಗುವ ಕಾರ್ಯಗಾರ/ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತರಬೇತಿ ಹೊಂದಿದ ಎಲ್ಲಾ ಉಪನ್ಯಾಸಕರು ಸದರಿ ಕೋರ್ಸನ್ನು ಬೋಧಿಸಲು ಅರ್ಹರೆಂದು ಸರ್ವಾನುಮತದಿಂದ ನಿಣರ್ಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:35(2023-24)

**ವಿಷಯ:** Cyber Security ಕೌಶಲ್ಯ ವರ್ಧಕ ಕೋರ್ಸನ್ನು ಬೋಧಿಸಲು ಉಪನ್ಯಾಸಕರ ಬೋಧನಾರ್ಹತೆ ನಿಗದಿಪಡಿಸುವ ಕುರಿತು.

**ನಿರ್ಣಯ:** ಪ್ರಸ್ತಾವಿತ ಕೋರ್ಸಿಗೆ ಸಂಬಂಧಿಸಿ ವಿಶ್ವವಿದ್ಯಾನಿಲಯದಿಂದ ಆಯೋಜಿಸಲಾಗುವ ಕಾರ್ಯಗಾರ/ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತರಬೇತಿ ಹೊಂದಿದ ಎಲ್ಲಾ ಉಪನ್ಯಾಸಕರು ಸದರಿ ಕೋರ್ಸನ್ನು ಬೋಧಿಸಲು ಅರ್ಹರೆಂದು ಸರ್ವಾನುಮತದಿಂದ ನಿಣರ್ಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:36(2023-24)

**ವಿಷಯ:** Constitution of India, Ability Enhancement Compulsory Course ನ ಶಿರೋನಾಮೆ ಬದಲಾವಣೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:37(2023-24)

**ವಿಷಯ:** ಆಳ್ವಾಸ್ ಕಾಲೇಜು, ಮೂಡಬಿದ್ರೆ ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

| | |
|---|---|
| **ನಿರ್ಣಯ:** | ಸದರಿ ವಿದ್ಯಾಸಂಸ್ಥೆಗೆ ಭೇಟಿ ನೀಡಿದ ಸ್ಥಾಯಿ ಸಮಿತಿಯ ವರದಿಯನ್ನು ಅಂಗೀಕರಿಸಿ ಪ್ರಸ್ತಾವನೆಯನ್ನು ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:38(2023-24) |
| **ವಿಷಯ:** | ಪೂರ್ಣಪ್ರಜ್ಞಾ ಕಾಲೇಜು, ಉಡುಪಿ ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ. |
| **ನಿರ್ಣಯ:** | ಸದರಿ ವಿದ್ಯಾಸಂಸ್ಥೆಗೆ ಭೇಟಿ ನೀಡಿದ ಸ್ಥಾಯಿ ಸಮಿತಿಯ ವರದಿಯನ್ನು ಅಂಗೀಕರಿಸಿ ಪ್ರಸ್ತಾವನೆಯನ್ನು ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:39(2023-24) |
| **ವಿಷಯ:** | ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಆಂಡ್ ಕಾಮರ್ಸ್, ನೆಹರೂ ನಗರ ಪುತ್ತೂರು ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ. |
| **ನಿರ್ಣಯ:** | ಸದರಿ ವಿದ್ಯಾಸಂಸ್ಥೆಗೆ ಭೇಟಿ ನೀಡಿದ ಸ್ಥಾಯಿ ಸಮಿತಿಯ ವರದಿಯನ್ನು ಅಂಗೀಕರಿಸಿ ಪ್ರಸ್ತಾವನೆಯನ್ನು ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ: ಶೈ.ಮ.ಸಾ.ಸ.2:40(2023-24) |
| **ವಿಷಯ:** | ದಿನಾಂಕ 28.02.2023ರಂದು ನಡೆದ ಸಿಂಡಿಕೇಟು ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ತಾತ್ಕಾಲಿಕ ನೆಲೆಯಲ್ಲಿ ನೇಮಕಗೊಂಡು 2005ರಲ್ಲಿ ಖಾಯಂಗೊಂಡ ಸಿಬ್ಬಂದಿಗಳ ಖಾಯಂಪೂರ್ವದ ಸೇವೆಯನ್ನು ಸೂಪರ್ ನ್ಯೂಮರರಿಯಾಗಿ ಸೇವಾಹಿರಿತನ, ಮುಂಭಡ್ತಿ ನೀಡಲು ನಿಯಮಾನುಸಾರ ಪರಿನಿಯಮ ರಚಿಸುವ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:41(2023-24) |
| **ವಿಷಯ:** | ಬಿ.ಎ.(ಹೆಚ್.ಆರ್.ಡಿ.) ಪದವಿ ಕಾರ್ಯಕ್ರಮವನ್ನು ಬೋಧಿಸಲು ಉಪನ್ಯಾಸಕರ ಬೋಧನಾರ್ಹತೆ ನಿಗದಿಪಡಿಸುವ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:42(2023-24) |
| **ವಿಷಯ:** | ಪ್ರವೇಶಾತಿ ಪ್ರಕ್ರಿಯೆಯನ್ನು ಕೇಂದ್ರೀಕೃತ ಪ್ರವೇಶಾತಿ ಮೂಲಕ ಕೈಗೊಳ್ಳುವ ಬಗ್ಗೆ. |

| | |
|---|---|
| **ನಿರ್ಣಯ:** | ಪ್ರಸ್ತಾವನೆಯನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಕೇಂದ್ರೀಕೃತ ಪ್ರವೇಶಾತಿ ಪ್ರಕ್ರಿಯೆಯ ಮೂಲಕ ಕೈಗೊಳ್ಳುವ ಸಂಬಂಧ ವಿನಿಯಮವನ್ನು ರಚಿಸಲು ಒಂದು ಸಮಿತಿಯನ್ನು ರಚಿಸಬೇಕಾಗಿ ಸಭೆಯಲ್ಲಿ ನಿರ್ಣಯಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:43(2023-24) |
| **ವಿಷಯ:** | ಬ್ಯಾಚುಲರ್ ಇನ್ ಆಡಿಯಾಲಜಿ ಆಂಡ್ ಸ್ಪೀಚ್ ಲ್ಯಾಂಗ್ವೇಜ್ ಪಾಥಾಲಜಿ (BASLP) ಕಾರ್ಯಕ್ರಮದ ವಿದ್ಯಾರ್ಥಿ ಪ್ರವೇಶಾರ್ಹತೆ ಅನುಮೋದನೆ ಬಗ್ಗೆ. |
| **ನಿರ್ಣಯ:** | ಪ್ರಸ್ತಾವಿತ ಕಾರ್ಯಕ್ರಮದ ವಿದ್ಯಾರ್ಥಿ ಪ್ರವೇಶಾರ್ಹತೆಗೆ ಸಂಬಂಧಿಸಿ Rehabilitation Council of India (RCI)ನ ಮಾರ್ಗಸೂಚಿಯನುಸಾರ ಮರುಪರಿಶೀಲಿಸಿ ಸಲ್ಲಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:44(2023-24) |
| **ವಿಷಯ:** | ಸ್ನಾತಕೋತ್ತರ ಕಂಪ್ಯೂಟರ್ ಅಪ್ಲಿಕೇಷನ್ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ. |
| **ನಿರ್ಣಯ:** | ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:45(2023-24) |
| **ವಿಷಯ:** | ಸ್ನಾತಕೋತ್ತರ ಕಂಪ್ಯೂಟರ್ ಸಾಯನ್ಸ್ ಕಾರ್ಯಕ್ರಮದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ. |
| **ನಿರ್ಣಯ:** | ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ: ಶೈ.ಮ.ಸಾ.ಸ.2:46(2023-24) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಉಪಕುಲಸಚಿವ/ಸಮಾನ ವೃಂದದ ಹುದ್ದೆಗಳ ವೃಂದ ಮತ್ತು ನೇಮಕಾತಿ ವಿಧಾನ ಕುರಿತ ಕರಡು ಪರಿನಿಯಮದ ಅನುಮೋದನೆ ಬಗ್ಗೆ. |
| **ನಿರ್ಣಯ:** | ಕರಡು ಪರಿನಿಯಮದಲ್ಲಿ ಉಪಕುಲಸಚಿವರ ಹುದ್ದೆಗೆ ನಿಗದಿಪಡಿಸಲಾದ ಅರ್ಹತಾ ಅವಧಿಯನ್ನು 3 ವರ್ಷಗಳ ಬದಲಿಗೆ 2 ವರ್ಷಗಳೆಂದು ನಮೂದಿಸುವಂತೆ ತಿಳಿಸಿ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ: ಶೈ.ಮ.ಸಾ.ಸ.2:47(2023-24) |

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಸಂಬಂಧಿ ಪರಿಷ್ಕೃತ Ordinance Governing the Acts of Indiscipline and Malpractice ರ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಶೈ.ಮ.ಸಾ.ಸ.2:48(2023-24)

**ವಿಷಯ:** ಶೈಕ್ಷಣಿಕ ವರ್ಷ 2023-24ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಸ್ನಾತಕ /ಸ್ನಾತಕೋತ್ತರ /ಪಿ.ಹೆಚ್.ಡಿ. ಕಾರ್ಯಕ್ರಮಗಳಿಗೆ ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವರ್ಷ 2023-24ನೇ ಸಾಲಿನ ಸ್ನಾತಕೋತ್ತರ ಕಾರ್ಯಕ್ರಮಗಳ (MBA,MCA& M.Ed. ವಿಭಾಗಗಳನ್ನು ಹೊರತುಪಡಿಸಿ) ಎಲ್ಲಾ ತರಗತಿಗಳನ್ನು ದಿನಾಂಕ 12.10.2023ರಿಂದ ಪ್ರಾರಂಭಿಸುವುದಾಗಿ ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಕಾರ್ಯಕ್ರಮಗಳಿಗೆ ಅಳವಡಿಸಲಾದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಪಠ್ಯಕ್ರಮಗಳ ಕಾರ್ಯಯೋಜನೆಯಲ್ಲಿ 3 ಮತ್ತು 4ನೇ ಸೆಮಿಸ್ಟರುಗಳ SEC ರಡಿ ಈ ಹಿಂದೆ Artificial Intelligence ಅಥವಾ Financial Education and Investment Awareness ಕೋರ್ಸುಗಳನ್ನು ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ನೀಡುತ್ತಿದ್ದು, ಸರಕಾರದ ನಿರ್ದೇಶನದಂತೆ ಶೈಕ್ಷಣಿಕ ವರ್ಷ 2023-24ನೇ ಸಾಲಿನಿಂದ 3 ಮತ್ತು 4ನೇ ಸೆಮಿಸ್ಟರುಗಳ ಪಠ್ಯಕ್ರಮಗಳಲ್ಲಿ Artificial Intelligence ಕೋರ್ಸನ್ನು ಕೈಬಿಟ್ಟು Cyber Security ಅಥವಾ Financial Education and Investment Awareness ಕೋರ್ಸನ್ನು ಪರ್ಯಾಯವಾಗಿ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ನೀಡಬೇಕಾಗಿ ಸಭೆಯಲ್ಲಿ ತಿಳಿಸಲಾಯಿತು.
3. ಸರಕಾರದ ನಿರ್ದೇಶನದಂತೆ ಪದವಿ ಕಾರ್ಯಕ್ರಮಗಳ 6ನೇ ಸೆಮಿಸ್ಟರಿನ ಪಠ್ಯಕ್ರಮಗಳ ಕಾರ್ಯಯೋಜನೆಯಲ್ಲಿ Internship ಎಂಬುದಾಗಿ ನಿಗದಿಪಡಿಸಲಾಗಿರುವುದನ್ನು Mini Project ಎಂಬುದಾಗಿ ಬದಲಾಯಿಸಿಕೊಂಡು, Mini Projectನ ಮೌಲ್ಯಮಾಪನನ್ನು ಆಂತರಿಕ ಪರೀಕ್ಷಕರಿಂದಲೇ ನಿರ್ವಹಿಸಬೇಕಾಗಿ ನಿರ್ಣಯಿಸಲಾಯಿತು.

4. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಕಾರ್ಯಕ್ರಮಗಳ ಪಠ್ಯಕ್ರಮಗಳಲ್ಲಿ ವಿವಿಧ ನಮೂನೆಯ

ಕೌಶಲ್ಯವರ್ಧಕ (skill based), Soft skill ಕೋರ್ಸುಗಳನ್ನು ಅಳವಡಿಸಲು ಹೆಚ್ಚಿನ ಉತ್ತೇಜನ ನೀಡಬೇಕಾಗಿ ಹಾಗೂ ಕೋರ್ಸುಗಳ ಗುಣಮಟ್ಟವನ್ನು ಹೆಚ್ಚಿಸಿಕೊಂಡು ಇದು ವಿದ್ಯಾರ್ಥಿಗಳ ಉದ್ಯೋಗ ಭವಿಷ್ಯಕ್ಕೆ ಪೂರಕವಾಗಬೇಕಾಗಿ ಅಧ್ಯಯನ ಮಂಡಳಿ ಅಧ್ಯಕ್ಷರುಗಳಿಗೆ ಸಭೆಯಲ್ಲಿ ಸಲಹೆ ನೀಡಲಾಯಿತು.

5. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿನ ಉದ್ಯೋಗ ಮಾಹಿತಿ ಕೇಂದ್ರದ ಕಾರ್ಯಚಟುವಟಿಕೆಗಳಲ್ಲಿ ಶೈಕ್ಷಣಿಕ ಮಂಡಳಿಗೆ ಸರಕಾರದಿಂದ ನಾಮನಿರ್ದೇಶಿತರಾದ ಸದಸ್ಯರುಗಳನ್ನು ಜನಪ್ರತಿನಿಧಿಗಳ ನೆಲೆಯಲ್ಲಿ ಸೇರಿಸಿಕೊಂಡು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗಿ ಸಲಹೆ ನೀಡಲಾಯಿತು.
6. ಮಾನ್ಯ ಕುಲಸಚಿವರು ಸಭೆಯಲ್ಲಿ ಮಾತನಾಡುತ್ತಾ, ಕರ್ನಾಟಕ ವಿಧಾನಪರಿಷತ್ತಿನ ಶಿಕ್ಷಕರ ಕ್ಷೇತ್ರದಿಂದ ಹಾಗೂ ಪದವೀಧರರ ಕ್ಷೇತ್ರದಿಂದ ಸರಕಾರದ ವತಿಯಿಂದ ಚುನಾವಣೆಯನ್ನು ನಡೆಸಲಾಗುವ ವಿಚಾರವನ್ನು ತಿಳಿಸುತ್ತಾ, ಎಲ್ಲಾ ಪದವೀಧರರು ಹಾಗೂ ಶಿಕ್ಷಕರು ತಪ್ಪದೇ ನೋಂದಯಿಸಬೇಕಾಗಿ ಈ ಸಂಬಂಧ ಲಿಂಕನ್ನು ಒದಗಿಸುವುದಾಗಿ ತಿಳಿಸಿದರು.

ಕೊನೆಯದಾಗಿ ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |